# ಭೇದವಿಲ್ಲ!

ಸಿನಿಮಾಗಳನ್ನು ಎರಡು ಭಾಗಗಳಾಗಿ ವಿಂಗಡಿಸಿ ದಶಕಗಳೇ ಕಳೆದಿವೆ. ಕಲಾತ್ಮಕ ಮತ್ತು ವ್ಯಾಪಾರಿ ಚಿತ್ರಗಳೆಂದು ನಿರ್ದೇಶಕನ ಹೆಸರಿನಿಂದಲೇ ಗುರುತಿಸಲಾಗುತ್ತಿದೆ. ಕಲಾತ್ಮಕ ಚಿತ್ರಗಳೆಂದರೆ ಜನ ನೋಡದ, ಪ್ರಶಸ್ತಿಗಳನ್ನು ಪಡೆಯುವ ಸಿನಿಮಾಗಳು. ವ್ಯಾಪಾರಿ ಚಿತ್ರಗಳೆಂದರೆ ದೊಡ್ಡ ಮಟ್ಟದ ಪ್ರಚಾರ, ತಾರೆಯರು ಇರುವ, ಬಹುಕೋಟಿ ವೆಚ್ಚದ ಚಿತ್ರಗಳು ಎಂಬ ವ್ಯಾಖ್ಯಾನಗಳಿವೆ. ಕಲಾತ್ಮಕವಾಗಿ ಚಿತ್ರ ಮಾಡಿ ಪ್ರಶಸ್ತಿ ಪಡೆದ ಎಷ್ಟೋ ಯುವ ನಿರ್ದೇಶಕರು, ತಾವೂ ಇಂತಹ ಹಣೆ ಪಟ್ಟಿ ಪಡೆದುಕೊಳ್ಳುತ್ತೇವೆ ಎಂದು ಸ್ಟಾರ್ ನಟರನ್ನು ಹಾಕಿಕೊಂಡು ರಂಜನಾತ್ಮಕ ಸಿನಿಮಾ ಮಾಡುವ ಅನಿವಾರ್ಯತೆಗೆ ಸಿಲುಕುತ್ತಾರೆ. ಆದರೆ ವಾಸ್ತವವಾಗಿ ಮುಖ್ಯವಾಹಿನಿ ಅಥವಾ ಕಲಾತ್ಮಕ ಸಿನಿಮಾ ಎಂಬ ಭೇದವೇ ಇಲ್ಲ ಎನ್ನುವುದು ಕಾಜೋಲ್ ಅಭಿಪ್ರಾಯ.

ಸಿನಿಮಾ ಮಾಡುವುದೇ ಜನ ನೋಡಿ ಖುಷಿ ಪಡಲಿ ಎಂದು. ಕಲಾತ್ಮಕ ಅಥವಾ ಮುಖ್ಯವಾಹಿನಿ ಎಂಬ ವಿಂಗಡಣೆಯನ್ನು ಕಿತ್ತುಹಾಕಿ ಪ್ರೇಕ್ಷಕರಿಗೆ ಅದನ್ನು ಬಿಡಬೇಕು. ಅವರೇ ಆ ಕಥೆ ಮತ್ತು ಪಾತ್ರಗಳನ್ನು ನಿರ್ಧರಿಸುತ್ತಾರೆ. ಸಿನಿಮಾಗಳ ನಡುವೆ ನಿಜಕ್ಕೂ ಇಂತಹ ವ್ಯತ್ಯಾಸವಿಲ್ಲ. ಇರುವುದು ಒಳ್ಳೆಯ ಸಿನಿಮಾಗಳು ಮತ್ತು ಕೆಟ್ಟ ಸಿನಿಮಾಗಳು ಎಂದಿದ್ದಾಳೆ ಆಕೆ.

ಅಂದ ಹಾಗೆ ಕಾಜೋಲ್, 'ಶಿಪ್ ಆಫ್ ಥೀಸೀಸ್'ನಂತಹ ವಿಭಿನ್ನ ಪ್ರಯೋಗ ನಡೆಸಿದ್ದ ಆನಂದ್ ಗಾಂಧಿ ನಿರ್ದೇಶನದ ಚಿತ್ರಕ್ಕೆ ಸಹಿ ಹಾಕಿದ್ದಾಳೆ. ಕಲಾತ್ಮಕ ಮತ್ತು ಮುಖ್ಯವಾಹಿನಿಯ ಚಿತ್ರಗಳ ಕುರಿತು ಆಕೆ ಪ್ರಸ್ತಾಪ ಮಾಡಲು ನೈಜ ಕಾರಣವಿದು.





# ಕಾದಂಬರಿಗಳತ್ತ ನೋಡಿ!

ಸಿನಿಮಾರಂಗ ಹುಟ್ಟು ಪಡೆದ ಸಮಯದಲ್ಲಿ ಅದಕ್ಕೆ ಆಸರೆಯಾಗಿದ್ದು ಸಾಹಿತ್ಯ ಕ್ಷೇತ್ರ. ಎರಡೂ ಜತೆ ಜತೆಗೇ ದಶಕಗಳಷ್ಟು ಸಮಯ ನಡೆದವು. ಈಗ, ಸಿನಿಮಾರಂಗ ಸಾಹಿತ್ಯದಿಂದ ಬಹುತೇಕ ದೂರ ಸಾಗಿದೆ. ಕಥೆ ಅಥವಾ ಕಾದಂಬರಿಯನ್ನು ಸಿನಿಮಾ ರೂಪಕ್ಕಿಳಿಸುವ ಸಾಹಸಕ್ಕೆ ಮುಂದಾಗುವವರು ಅತಿ ವಿರಳ. ಬಾಲಿವುಡ್‌ನಲ್ಲಿ ಇಂತಹ ಕೆಲಸ ಆಗಬೇಕಿದೆ ಎನ್ನುವುದು ಹಿರಿಯ ನಟಿ ಟ್ವಿಂಕಲ್ ಖನ್ನಾ ಅಭಿಪ್ರಾಯ. ಕಾದಂಬರಿಗಳಲ್ಲಿ ಸಿನಿಮಾಕ್ಕೆ ಅಗತ್ಯವಾದ ಗಟ್ಟಿಯಾದ ಪ್ಲಾಟ್ ಇರುತ್ತದೆ. ಅದರ ಆಧಾರದಲ್ಲಿ ಅದ್ಭುತವಾದ ಸಿನಿಮಾ ಸೃಷ್ಟಿ ಸಾಧ್ಯ ಎಂದಿದ್ದಾಳೆ ಆಕೆ. ಅಂದ ಹಾಗೆ, ಬರಹಗಾರ್ತಿಯಾಗಿಯೂ ಗುರುತಿಸಿಕೊಳ್ಳುತ್ತಿರುವ ಟ್ವಿಂಕಲ್, ತನ್ನ ನಾಲ್ಕು ಕಿರು ಕಥೆಗಳ ಸಂಗ್ರಹ 'ದಿ ಲೆಜೆಂಡ್ ಆಫ್ ಲಕ್ಷ್ಮಿ ಪ್ರಸಾದ್' ಪುಸ್ತಕ ಹೊರತಂದಿದ್ದಾಳೆ. ಇದು ಆಕೆಯ ಎರಡನೇ ಪುಸ್ತಕ. ತನ್ನ ಕಥೆಗಳನ್ನೇ ಸಿನಿಮಾ ಮಾಡಿ ಎಂದು ಸಿನಿಮಾ ನಿರ್ಮಾತೃಗಳಿಗೆ ಆಕೆ ಪರೋಕ್ಷವಾಗಿ ಹೀಗೆ ಕರೆ ನೀಡುತ್ತಿದ್ದಾಳೆ ಎಂದು ಕುಹಕವಾಡುತ್ತಿದ್ದಾರೆ ಕೆಲವರು.

ಮಹಿಳಾವಾದ ಎನ್ನುವುದು ಎಲ್ಲರಲ್ಲಿಯೂ ಇರುತ್ತದೆ ಎನ್ನುವುದು ಟ್ವಿಂಕಲ್ ಗ್ರಹಿಕೆ. ಟ್ವಿಂಕಲ್ ಹೇಳಿಕೊಳ್ಳುವಂತೆ, ಆಕೆ ಹೆಮ್ಮೆಯ ಮಹಿಳಾವಾದಿ. 'ಮಹಿಳಾವಾದ' ಎಂಬ ಪದವನ್ನು ಹೇಳಲು ಹಿಂಜರಿಯುವವರು ಶತಮೂರ್ಖರು ಎಂದು ವ್ಯಾಖ್ಯಾನಿಸಿದ್ದಾಳೆ. ಪುರುಷರು ತನ್ನನ್ನು ಸಿಲುಕಿಸಿದ ಪಂಜರದಿಂದ ಹೊರಬರುವ ಪ್ರಯತ್ನದಲ್ಲಿ ತಾನಿರುವುದಾಗಿ ಹೇಳಿಕೊಂಡಿದ್ದಾಳೆ.

■ ಅಮಿ